**ಸಾಕ್ಷಿಯನ್ನು ದಿನಾಂಕ: 03-07-2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು :- ಅರ್ಜಿದಾರರ ಪರ ವಕೀಲರಿಂದಃ**

ಸರ್ದಾರ ಮತ್ತು ಅಮೀರ್ ರವರಿಗೆ ಆಸ್ತಿ ಅವರ ತಂದೆಯವರಿಂದ ಬಂದಿರುತ್ತದೆ. ಇಸ್ಮೈಲ್ ರವರಿಂದ ಅಮೀರ ಸಾಬ್, ಸರ್ದಾರ್ ಸಾಬ್ ಮತ್ತು ಇಬ್ರಾಹಿಂ ಸಾಬ್ ಮೂರು ಜನ ಮಕ್ಕಳು. ಸದರಿ ಮೂರು ಜನ ಮಕ್ಕಳು ಏನು ದಾಖಲೆಯನ್ನು ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿದಾರರು ಅಸಮರ್ಪಕವಾಗಿ ಉತ್ತರಿಸಿರುತ್ತಾರೆ. ಸದರಿ ದಾಖಲೆಯನ್ನು ನಾನು ನೋಡಿರುತ್ತೇನೆ. ಇಸ್ಮೈಲ್ ಸಾಬ್ ರವರಿಗೆ ಅವರ ತಂದೆಯ ಕಡೆಯಿಂದ ಜಮೀನು ಬಂದಿದೆ ಎಂದು ನಾನು ದಾಖಲೆಯನ್ನು ನೋಡಿರುತ್ತೇನೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ಸರ್ದಾರ ಮತ್ತು ಅಮೀರ್ ರವರ ಮಧ್ಯೆ ಆಗಿರುವ 1996 ರ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ನನಗೆ ಕ್ರಯಪತ್ರ ಮಾಡಿಕೊಡುವ ಸಂದರ್ಭದಲ್ಲಿ ಸದರಿ ವಿಭಾಗ ಪತ್ರವನ್ನು ನನಗೆ ನೀಡಿರುತ್ತಾರೆ. ಸದರಿ ವಿಚಾರವನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುತ್ತೇನೆ. ಎಷ್ಟು ವರ್ಷದ ಪಹಣಿ ಮತ್ತು ಖಾತೆಯನ್ನು ನಾನು ಖರೀದಿಸುವ ಸಂದರ್ಭದಲ್ಲಿ ನೋಡಿರುತ್ತೇನೆ ಎಂದು ಕೇಳಲು ಪ್ರಶ್ನೆಗೆ ಸಾಕ್ಷಿಯು ಕೊಟ್ಟಿರುತ್ತೇನೆ ಎಂದು ಮಾತ್ರ ಉತ್ತರಿಸಿರುತ್ತಾರೆ. ನಾನು ದಾಖಲೆಗಳನ್ನು ಯಾವ ವಕೀಲರಿಗೆ ತೋರಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಸದರಿ ವಕೀಲರು ಸರ್ದಾರ್ ಮತ್ತು ಅಮೀರ ರವರಿಗೆ ಮಾರಾಟ ಮಾಡಲು ಹಕ್ಕು ಇದೆ ಎಂದು ದಾಖಲೆಗಳನ್ನು ಪರಿಶೀಲಿಸಿ ಬರವಣಿಗೆಯಲ್ಲಿ ಕಾನೂನು ಅಭಿಪ್ರಾಯ ನೀಡಿರುತ್ತಾರೆ. ಸದರಿ ಕಾನೂನು ಅಭಿಪ್ರಾಯವನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ.

ನಿಪಿ-12 ನಾನು ಮತ್ತು ಸರ್ದಾರರವರು ಸೇರಿ ಸೃಷ್ಟಿಸಿ ಹಾಜರು ಪಡಿಸಿದ ದಾಖಲೆ ಎಂದರೆ ಸರಿಯಲ್ಲ. ಸದರಿ ಆಸ್ತಿಗೂ ಮತ್ತು ಸರ್ದಾರವರಿಗೂ ಯಾವುದೇ ರೀತಿಯ ಸಂಬಂಧ ಇಲ್ಲ ಹಾಗೂ ಅದನ್ನು ಮಾರಾಟ ಮಾಡಲು ಅವರಿಗೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸರ್ದಾರವರು ಇಬ್ರಾಹಿಂ ಸಾಬ್ ರವರ ಮಗ ಅಲ್ಲ ಎಂದರೆ ಸರಿಯಲ್ಲ. ನಿಪಿ-13 ರಿಂದ 16 ದಾಖಲೆಗಳು ಈ ಪ್ರಕರಣಕ್ಕೆ ಅನುಕೂಲ ಮಾಡಿಕೊಳ್ಳಲು ಸೃಷ್ಟಿಸಿದ ದಾಖಲೆಗಳು ಎಂದರೆ ಸರಿಯಲ್ಲ. ನಾವು ಖರೀದಿಸಿದ್ದೇವೆ ಎಂದು ಹೇಳಲು ಸ್ವತ್ತಿನ ಸ್ವಾಧೀನವನ್ನು ನಾವು ಹೊಂದಿಲ್ಲ ಹಾಗೂ ನಮಗೂ ಮತ್ತು ಸದರಿ ಜಮೀನಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ-12 ಕ್ಕೆ ಸಾಕ್ಷಿದಾರರು ಸಹಿ ಮಾಡಿರುತ್ತಾರೆ ಆದರೆ ಅವರು ಯಾರು ಎಂದು ಈಗ ನನಗೆ ಹೇಳಲು ಬರುವುದಿಲ್ಲ. ಸದರಿ ಕ್ರಯಪತ್ರದ ಪ್ರಕಾರ ನಾನು ಖರೀದಿಸಿರುವ ಸ್ವತ್ತಿನ ಪೂರ್ವಕ್ಕೆಃ ಮಂಜುನಾಥ

ರವರ ಸ್ವತ್ತು ಪಶ್ಚಿಮಕ್ಕೆಃ ಕೆರೆ ಇತ್ತು, ಈಗ ಸದರಿ ಜಮೀನನ್ನು ಯಾರು ಖರೀದಿಸಿದ್ದಾರೆ ಎನ್ನುವುದು ಗೊತ್ತಿಲ್ಲ, ಉತ್ತರಕ್ಕೆಃ ಅಮೀರ್ ಸಾಬ್ ರವರಿಗೆ ಸೇರಿದ ಸ್ವತ್ತು ಮತ್ತು ದಕ್ಷಿಣಕ್ಕೆಃ ಖಾಸಗಿ ಸ್ವತ್ತು ಇದ್ದು, ಅವರು ಹೆಸರು ಗೊತ್ತಿಲ್ಲ. ನಾನು ಮತ್ತು ಸರ್ದಾರರವರು ಸೇರಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಅರ್ಜಿದಾರರಿಗೆ ಜಮೀನನ್ನು ಕೊಡಬಾರದೆಂದು ದುರುದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**